## ಜೆ. ಎಂ. ಎಫ್. ಸಿ.–III ನೇ ನ್ಯಾಯಾಲಯ, ಹುಬ್ಬಳ್ಳಿ

ಸಿ ಸಿ ನಂ: 1844/2020

ಪಿ.ಡಬ್ಲ್ಯೂ- 1

ದಿಃ 17 –12–2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಎ ವಿ ಬಿ. ಅವರಿಂದ**

ನಾನು ಸುಮಾರು 26 ವರ್ಷದಿಂದ ಆರೋಪಿತನೊಂದಿಗೆ ವ್ಯವಹಾರ ಮಾಡುತ್ತಿದ್ದೆನೆ. ಆರೋಪಿತನು ಸಾಗರ ನಿವಾಸಿ. ಆರೋಪಿತನು ಸಾಮಾನ್ಯವಾಗಿ ನನ್ನ ಹತ್ತಿರ ವ್ಯವಹಾರ ಆರಂಭವಾದಾಗಿನಿಂದ ಉದರಿ ಪಡೆಯುತ್ತಿದ್ದರು. ಸಾಮಾನ್ಯವಾಗಿ ಬಿಲ್ಲುಗಳ ಮೇಲೆ ಉದ್ರಿ ಎಂದರೆ ಉದ್ರಿ ಎಂದು ಹಾಗೂ ನಗದು ಹಣ ಇದ್ದರೆ ನಗದು ಹಣ ಎಂದು ಗುರುತು ಮಾಡುತ್ತೇವೆ ಎಂದರೆ ಸರಿ. ಉದ್ರಿ ಎಂದು ಗುರುತು ಮಾಡದೇ ಇದ್ದರೆ ಅದು ನಗದು ಹಣ ತುಂಬಿದ್ದು ಎಂದು ನಂಬಲಾಗುವುದು ಎಂದರೆ ಸರಿ. ಸಾಕ್ಷಿಗೆ ನಿಪಿ-6 ರಿಂದ 9 ನ್ನು ತೋರಿಸಲಾಗಿ ಅದರಲ್ಲಿ ಉದ್ರಿ ಎಂದು ಗುರುತು ಮಾಡಿಲ್ಲ ಎಂದರೆ ಸಾಕ್ಷಿಯು ಆವು ಎಲ್ಲಾ ಉದ್ರಿಯಾಗಿ ಇರುತ್ತವೆ ಕ್ಯಾಶ ಮುಖಾಂತರ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಅಂಗಡಿ ದೊಡ್ಡ ವ್ಯಾಪಾರ ಇದೆ ಎಂದರೆ ಸರಿ. ಪ್ರತಿ ದಿನ ಅಂದಾಜು ಒಂದು ಅಥವಾ ಎರಡು ಬಿಲ್ಲ ಆಗಬಹುದು. ನಾನು ಇನಕಂ ಟ್ಯಾಕ್ಸ ರಿಟರ್ನ್ಸ ತುಂಬುತ್ತೇನೆ. ಅದರಲ್ಲಿ ಎಲ್ಲಾ ಸೇಲ್ಸ ಕಾಣಿಸಿರುತ್ತೇನೆ ಎಂದರೆ ಸರಿ. ಪ್ರತಿ 3 ತಿಂಗಳಿಗೆ ನಾನು ಜಿ ಎಸ್ ಟಿ ತುಂಬ ಬೇಕು ಎಂದರೆ ಸರಿ. ಅದರಂತೆ ನಾನು 2019 ರಲ್ಲಿ ಜಿ ಎಸ್ ಟಿ ತುಂಬಿದ್ದೆನೆ. ನಿಪಿ–6 ರಿಂದ 9 ಬಿಲ್ಲುಗಳನ್ನು ನಾನು ಸೃಷ್ಟಿಸಿ ಆರೋಪಿತನಿಗೆ ಮೋಸ ಮಾಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ. ನಾನು ಸಾಮಾನ್ಯವಾಗಿ ಹೊರ ಜಿಲ್ಲೆಯವರ ಹತ್ತಿರ ವ್ಯವಹಾರ ಮಾಡಬೇಕಾದರೆ ನಾನು ಖಾಲಿ ಸಹಿ ಮಾಡಿದ ಚೆಕ್‌ಗಳನ್ನು ಪಡೆದಿರುತ್ತೇನೆ ಎಂದರೆ ಸಾಕ್ಷಿಯು ಕೆಲವ್ರೊಬ್ಬರ ಕಡೆ ಪಡೆದಿರುತ್ತೇನೆ ಹಾಗೂ ಕೆಲವ್ರೊಬ್ಬರ ಕಡೆ ಪಡೆದಿರುವುದಿಲ್ಲ ಎಂದು ನುಡಿಯುತ್ತಾನೆ. ಅದರಂತೆ ನಾನು ಆರೋಪಿತನ ಹತ್ತಿರ ಭದ್ರತೆಗಾಗಿ ಎರಡು ಚೆಕ್‌ಗಳನ್ನು ಪಡೆದಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಈಗ

ನಿಪಿ–6 ನ್ನು ತೋರಿಸಲಾಗಿ ಅದು 12–04–2019 ಕ್ಕೆ ಇನವಾಯ್ಸು ನಂಬರ 007 ಇದೆ ಎಂದರೆ ಸರಿ. ಸಾಕ್ಷಿಗೆ ಈಗ ನಿಪಿ–7 ನ್ನು ತೋರಿಸಲಾಗಿ ಅದು 25–04–2019 ಕ್ಕೆ ಇನವಾಯ್ಸು ನಂಬರ 013 ಇದೆ ಎಂದರೆ ಸರಿ. ನಾನು 12–04–2019 ರಿಂದ 25–04–2019 ರವರೆಗೆ ಕೇವಲ 6 ಬಿಲ್ಲುಗಳನ್ನು ಮಾಡಿದ್ದೆನೆ ಎಂದರೆ ಸರಿ. 25–04–2019 ರಿಂದ 30–04–2019 ರವರೆಗೆ ಎಷ್ಟು ಬಿಲ್ಲ ಆಗಿದೆ ನನಗೆ ನೆನಪಿಲ್ಲ. 2019 ರ ಬಿಲ್ಲುಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ನಿಪಿ–8 ನ್ನು ತೋರಿಸಲಾಗಿ ಅದು 30–04–2019 ಕ್ಕೆ ಇನವಾಯ್ಸು ನಂಬರ 014 ಇದೆ ಎಂದರೆ ಸರಿ. ಸದರಿ 25–04–2019 ರಿಂದ 30–04–2019 ರವರೆಗೆ ಯಾವುದೆ ವ್ಯವಹಾರ ಆಗಿಲ್ಲ ಎಂದರೆ ಸಾಕ್ಷಿಯು ನೋಡಬೇಕು ಎನ್ನುತ್ತಾರೆ. 30–04–2019 ರಿಂದ 24–05–2019 ರವರೆಗೆ ಆಗ ವ್ಯವಹಾರದ ಬಗ್ಗೆ ನನಗೆ ನೆನಪಿಲ್ಲ. 25–04–2019 ರಿಂದ 24–05–2019 ರವರೆಗೆ ಎಷ್ಟು ವ್ಯವಹಾರ ಆಗಿದ ಬಗ್ಗೆ ನನಗೆ ನೆನಪಿಲ್ಲ.

ಹೊರಗಡೆಯಿಂದ ನಮಗೆ ಆರ್ಡರ ಮಾಡಬೇಕಾದರೆ ಫೋನ ಮುಖಾಂತರ ಅಥವಾ ಲಿಖಿತ ರೂಪದಲ್ಲಿ ಕೊಡುತ್ತಾರೆ. ಆರೋಪಿತನು ನನಗೆ ಫೋನ ಮುಖಾಂತರ ಆರ್ಡರ ಮಾಡಿದ್ದರು. ನಾನು ಫೋನ ನಂಬರ ಆರ್ಡರದಲ್ಲಿ ಬರೆದಿರುತ್ತೇನೆ. ನಿಪಿ– 6 ರಿಂದ 9 ರವರೆಗೆ ಆರ್ಡರ ನಂಬರ ಆಗಲಿ ದಿನಾಂಕವಾಗಲಿ ಇರುವುದಿಲ್ಲ ಎಂದರೆ ಸರಿ. ಸದರಿ ನಿಪಿ–6 ರಿಂದ 9 ರಲ್ಲಿ ಕಾಣಿಸಿದ ವಾಹನಗಳು ನನ್ನದಲ್ಲ. ಸದರಿ ವಾಹನಗಳನ್ನು ಬಾಡಿಗೆಗಾಗಿ ಪಡೆದಿರುತ್ತೇನೆ. ನಾವು ನಮ್ಮ ವಾಹನಗಳಲ್ಲಿ ವಸ್ತುಗಳನ್ನು ಕಳುಹಿಸಿದ್ದು ಅದು ಅಲ್ಲಿ ಮುಟ್ಟಿದ ಮೇಲೆ ನಮಗೆ ಇನವಾಯ್ಸು ಬರುತ್ತದೆ ಎಂದರೆ ಸಾಕ್ಷಿಯ ಕೆಲವೊಮ್ಮೆ ಬರುತ್ತದೆ ಕೆಲವೊಮ್ಮೆ ಬರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ–6 ರಿಂದ 9 ರಲ್ಲಿ ವಸ್ತುಗಳನ್ನು ಪಡೆದವರ ಸಹಿ ಇಲ್ಲ ಎಂದರೆ ಸರಿ.

2018 ರಿಂದ ಆರೋಪಿತನು ನನ್ನ ಹತ್ತಿರ ಬಂದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ವ್ಯವಹಾರ ಆದ ಮೇಲೆ ಬಂದಿಲ್ಲ ಎಂದು ನುಡಿಯುತ್ತಾರೆ. ಆರೋಪಿತನು ನನಗೆ ಭೇಟಿ ಆಗದೇ ಇದ್ದ ಕಾರಣ ನಿಪಿ– 1 ಚೆಕ್‌ನ್ನು ಕೊಡವ ಪ್ರಶ್ನೆ ಬರುವುದಿಲ್ಲ

ಎಂದರೆ ಸರಿಯಲ್ಲ. ನಾನು ಭದ್ರತೆಗಾಗಿ ಪಡೆದ ಚೆಕ್‌ನ್ನು ದುರುಪಯೋಗ ಪಡಿಸಿಕೊಂಡಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಇದೆ

C/c ಜೆ.ಎಂ.ಎಫ್.ಸಿ- III, ನ್ಯಾಯಾಲಯ

ಹುಬ್ಬಳ್ಳಿ